## II ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## C.Misc. 89/2016

ಪಿ.ಡಬ್ಲ್ಯೂ. 1

ದಿನಾಂಕಃ 01.10.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಎದುರುದಾರರ ಪರ ಶ್ರೀ ಎಸ್.ಆರ್. ವಕೀಲರಿಂದಃ**

ಸರ್ವೆ ನಂಃ 6/2ರ ಸ್ವತ್ತಿಗೆ ನಾನೇ ಮಾಲೀಕ ಎಂದರೆ ಸರಿ. ನನ್ನ ಜಮೀನಿನಲ್ಲಿ ಟವರ್ ಹಾಕಿಲ್ಲ ಎಂದರೆ ಸರಿಯಲ್ಲ. ನನಗೆ ಎದುರುದಾರರು ಯಾವುದೇ ನೋಟೀಸು ನೀಡಿಲ್ಲ. ನಿಪಿ 1 ನನಗೆ ಎದುರುದಾರರು ನೀಡಿರುವ ದಾಖಲೆ ಎಂದರೆ ಸರಿ. ನಿಪಿ1ಕ್ಕೆ ನಾನು ಸಹಿ ಮಾಡಿ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಪರಿಹಾರವನ್ನು ಚೆಕ್ ಮೂಲಕ ನಾನು ಸ್ವೀಕರಿಸಿರುತ್ತೇನೆ ಎಂದರೆ ಸರಿ. ಸದರಿ ಚೆಕ್ಕುಗಳು ಮಾನ್ಯವಾಗಿವೆ ಎಂದರೆ ಸರಿ. ನನಗೆ ಟವರ್ ಬಾಬ್ತು ಎರಡು ಲಕ್ಷ, ಜಮೀನು ಬಾಬು ಒಂದು ಲಕ್ಷ ಐವತ್ತ ಒಂದು ಸಾವಿರದ ಇನ್ನೂರ ಅರವತ್ತು ರೂಪಾಯಿಗಳನ್ನು ಎದುರುದಾರರು ನೀಡಿರುತ್ತಾರೆ. ನೀಲಗಿರಿ ಬಾಬ್ತು ಹದಿನೆಂಟು ಸಾವಿರ ರೂಪಾಯಿಗಳನ್ನು ನೀಡಿರುತ್ತಾರೆ. ನಾನು ಪಡೆದಿರುವ ಪರಿಹಾರದ ಹಣದ ಬಗ್ಗೆ ನನ್ನ ಅರ್ಜಿಯಲ್ಲಿ ನಮೂದು ಮಾಡಿರುತ್ತೇನೆ. ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವ ಬಗ್ಗೆ ನನಗೆ ಜ್ಞಾಪಕವಿಲ್ಲ. ಚೆಕ್ನ ಜೆರಾಕ್ಸ್ ಪ್ರತಿಗಳನ್ನು ನಾನು ನೀಡಿರುತ್ತೇನೆ. ನಾನು ನನ್ನ ಬ್ಯಾಂಕ್ ಖಾತೆಯ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಏಳು ಲಕ್ಷದ ನಲವತ್ತೈದು ಸಾವಿರದ

ಎಂಟುನೂರ ಎಂಬತ್ತೆರಡು ರೂಪಾಯಿಗಳನ್ನು ಪ್ರತಿವಾದಿಗಳು ನನಗೆ ಆರು ಚೆಕ್ಕುಗಳ ಮೂಲಕ ನೀಡಿದ್ದಾರೆ ಎಂದರೆ ಸರಿಯಲ್ಲ. ಜಿಲ್ಲಾಧಿಕಾರಿಗಳ ಆದೇಶದಂತೆ ಎದುರುದಾರರು ನನಗೆ ಪರಿಹಾರ ನೀಡಿರುತ್ತಾರೆ ಎಂದರೆ ಸರಿಯಲ್ಲ.

ನನಗೆ ಯಾವುದೇ ನೋಟೀಸು ನೀಡದ ಕಾರಣ ನಾನು ಪರಿಹಾರ ಪಡೆಯುವ ವೇಳೆಗೆ ಆಕ್ಷೇಪಣೆಯನ್ನು ಸಲ್ಲಿಸಲು ಆಗಿರುವುದಿಲ್ಲ. ನೋಟೀಸು ನೀಡಿದ 15 ದಿನಗಳ ನಂತರ ಚೆಕ್ ನೀಡಿರುತ್ತಾರೆ. ಲೈನ್ ಕೆಳಗೆ ಎಲ್ಲಾ ಕೆಲಸಗಳನ್ನು ಮಾಡಬಹುದು ಎಂದು ಪ್ರಶ್ನಿಸಲಾಗಿ ಸಾಕ್ಷಿ ನಾನು ನನ್ನ ಜಮೀನನ್ನು ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿಕೊಂಡಿದ್ದು ನನ್ನ ಉದ್ದೇಶವು ಎದುರುದಾರರಿಂದ ಹಾಳಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಭೂ ಪರಿವರ್ತನೆಯನ್ನು ಗೆಜೆಟ್ ನೋಟಿಫಿಕೇಷನ್ ನಂತರ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಗೆಜೆಟ್ ನೋಟಿಫಿಕೇಷನ್ ಆಗುವ ಒಂದು ವರ್ಷ ಮೊದಲೇ ನಾನು ಭೂ ಪರಿವರ್ತನೆ ಮಾಡಿಸಿಕೊಂಡಿದ್ದೆ ಎಂದು ನುಡಿಯುತ್ತಾರೆ.

ಎದುರುದಾರರು ವೈಜ್ಞಾನಿಕವಾಗಿ ಪರಿಹಾರ ನೀಡಿರುವ ಕಾರಣ ನಾನು ಹೆಚ್ಚಿನ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನಾನು ಪರಿಹಾರವನ್ನು ಒಪ್ಪಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ದಾಖಲೆಗಳು ನನ್ನ ಜಮೀನಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ಪರಿಹಾರ ಮೊತ್ತದ ಬಗ್ಗೆ ನಮೂದು ಮಾಡದಿದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

(ನನ್ನ ಉಕ್ತಲೇಖನದಂತೆ  ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು